**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1903/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಶಿವಮಲ್ಲಪ್ಪ | ಪ್ರಾ ಸಾಃ 7 |
| ತಂದೆಯ ಹೆಸರು | | ಕಾಳಸ್ವಾಮಪ್ಪ | ಚಾಸಾಃ 7 |
| ವಯಸ್ಸು | | 60 | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಕಾರ್ಯ ಗ್ರಾಮ | ದಿಃ 04.06.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ-1 ರಿಂದ 6 ಮತ್ತು ಚಾಸಾ-8 ರಿಂದ 10 ರವರು ನಮ್ಮ ಗ್ರಾಮದವರು, ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿತರು ನಮ್ಮ ಗ್ರಾಮದವರಾಗಿರುತ್ತಾರೆ.

2. ಸುಮಾರು 9 ವರ್ಷಗಳ ಹಿಂದೆ ನಮ್ಮ ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿರುವ ದಾರಿಯ ವಿಚಾರವಾಗಿ ಆರೋಪಿತರು ಮತ್ತು ಚಾಸಾ-1 ರಿಂದ 3 ರವರ ನಡುವೆ ಗಲಾಟೆ ನಡೆದಿತ್ತು. ಗಲಾಟೆ ಸಂಜೆ 6.00 ಗಂಟೆಗೆ ನಡೆದಿತ್ತು. ನಾನು ಮನೆಯಲ್ಲಿದ್ದಾಗ ಗಲಾಟೆಯ ಶಬ್ದ ಕೇಳಿಸಿದ್ದು, ಆಗ ನಾನು ಗಲಾಟೆ ನಡೆಯುತ್ತಿದ್ದ ಸ್ಥಳಕ್ಕೆ ಹೋದೆನು. 1 ಮತ್ತು 2 ನೇ ಆರೋಪಿತರು ಮತ್ತು ಚಾಸಾ-1 ರವರ ನಡುವೆ ಗಲಾಟೆ ನಡೆದು ಒಬ್ಬರಿಗೊಬ್ಬರು ತಳ್ಳಾಡಿಕೊಳ್ಳುತ್ತಿದ್ದರು. ನಂತರ ಗಲಾಟೆಯನ್ನು ಬಿಡಿಸಿರುತ್ತೇವೆ. ಗಲಾಟೆಯ ಕುರಿತು ನಾನು ತನಿಖಾಧಿಕಾರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

( ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾನೆ. ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು  ಅನುಮತಿ ನೀಡಲಾಯಿತು )

**ಪಾಟೀ ಸವಾಲುಃ ಶ್ರೀ ಎಪಿಪಿ ಯವರಿಂದಃ**

3. ದಿನಾಂಕ 10.08.2014 ರ ಸಂಜೆ 6.00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಬಳಿ 1 ನೇ ಆರೋಪಿ ಮತ್ತು ಚಾಸಾ-1 ರವರ ನಡುವೆ ಗಲಾಟೆಯಾಗುತ್ತಿದ್ದು, ಸದರಿ ಗಲಾಟೆಯನ್ನು ಕೇಳಿಸಿಕೊಂಡು ನಾನು ಮತ್ತು ಚಾಸಾ-8 ರವರು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಸದರಿ ಕಾಲಕ್ಕೆ 1 ನೆ ಆರೋಪಿತನೊಂದಿಗೆ 2 ಮತ್ತು 3 ನೇ ಆರೋಪಿತರು ಇದ್ದರು ಎಂದರೆ ಸರಿ. ಚಾಸಾ-1 ರವರು ಓಡಾಡುವ ದಾರಿಗೆ ಅಡ್ಡಲಾಗಿ 1 ನೇ ಆರೋಪಿತನು ಎತ್ತಿನಗಾಡಿಯನ್ನು ನಿಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಚಾಸಾ-1 ರವರನ್ನು ತಬ್ಬಿ ಹಿಡಿದುಕೊಂಡು ಎಲ್ಲಿಗೂ ಹೋಗದಂತೆ ತಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಮುದ್ದೆಮಾಲು-1 ರ ದೊಣ್ಣೆಯಿಂದ ಚಾಸಾ-1 ರವರ ಹಣೆಗೆ ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಆಗ 2 ನೇ ಆರೋಪಿ ಚಾಸಾ-1 ರವರ ಎಡಕೆನ್ನೆ ಮತ್ತು ಬಲತೊಡೆಗೆ ಕಚ್ಚಿ ಗಾಯಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. 3 ನೇ ಆರೋಪಿ ಕೈಗಳಿಂದ ಚಾಸಾ-1 ರವರ ಮೈ ಕೈಗೆ ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಆಗ ಚಾಸಾ-2 ಮತ್ತು 3 ರವರು ಗಲಾಟೆ ಬಿಡಿಸಲು ಬಂದಿರುತ್ತಾರೆ ಎಂದರೆ ಸಾಕ್ಷಿ ಚಾಸಾ-3 ರವರು ಮಾತ್ರ ಬಂದಿರುತ್ತಾರೆ ಎಂದು ಹೇಳುತ್ತಾರೆ. ಆಗ 1 ನೇ ಆರೋಪಿ ಮುದ್ದೆಮಾಲು-1 ರ ದೊಣ್ಣೆಯಿಂದ ಚಾಸಾ-2 ರವರ ಎಡಗೈನ ಮುಂಗೈಗೆ ಹೊಡೆದು ತೀವ್ರ ಸ್ವರೂಪದ ಗಾಯವನ್ನು ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಹಲ್ಲಿನಿಂದ ಚಾಸಾ-3 ರವರ ಎಡಗೈನ ಉಂಗುರದ ಬೆರಳಿಗೆ ಕಚ್ಚಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ-3 ರವರನ್ನು ತಳ್ಳಿ ಕೆಳಕ್ಕೆ ಬೀಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಕುರಿತು ನಾನು ದಿನಾಂಕ

12.08.2014 ರಂದು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ನೆನಪಿಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮುದ್ದೆಮಾಲು-1 ನ್ನು ನಾನು ನೋಡಿಲ್ಲ.

**ಪಾಟೀ ಸವಾಲುಃ ಶ್ರೀ ಎಂ.ಬಿ, ವಕೀಲರಿಂದ ಆರೋಪಿ ಪರವಾಗಿಃ**

4. ನಾನು ಮತ್ತು ಚಾಸಾ-1 ರಿಂದ 3 ಸಂಬಂಧಿಕರು ಎಂದರೆ ಸರಿ. ನನ್ನ ಮತ್ತು ಚಾಸಾ-1 ರವರ ಮನೆ, ಒಂದು ಮನೆಯ ನಂತರದಲ್ಲಿ ಇವೆ. ಈಗಲೂ ಚಾಸಾ-1 ರವರು ನಮ್ಮ ಪಕ್ಕದ ಮನೆಯಲ್ಲಿಯೆ ವಾಸ ಇದ್ದಾರೆ ಎಂದರೆ ಸರಿ. ಆರೋಪಿತರ ಮನೆ ಮತ್ತು ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ನಡುವೆ ತಿರುಗಾಡಲು ಬಿಟ್ಟಿರುವಂತಹ 3 ಅಡಿಗಳ ಜಾಗ ಇದೆ ಎಂದರೆ ಸರಿ. ಸದರಿ ಜಾಗ ಆರೋಪಿತರಿಗೆ ಸೇರಿತ್ತು ಎಂದರೆ ಸರಿ. ಸದರಿ 3 ಅಡಿಗಳ ಜಾಗವನ್ನು ಮಲ್ಲಣ್ಣರವರಿಗೆ ಓಡಾಡಲು ಗ್ರಾಮಸ್ಥರು ಬಿಡಿಸಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗಲಾಟೆ ನಡೆದಾಗ ನಾನು ಮನೆಯಲ್ಲಿ ಇದ್ದೆನು ಎಂದರೆ ಸಾಕ್ಷಿ ನಾನು ಹೋಗಿ ಗಲಾಟೆಯನ್ನು ಬಿಡಿಸಿದ್ದೇನೆ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**